2017 ಕ.ತೀ.ವ 1113

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ.ಎಸ್. ಪಾಟೀಲ್

## ಮಂಡ್ಯದ ನ್ಯಾಷನಲ್ ಪೇಪರ್ ಮಿಲ್ಸ್‌ನ ಕಾರ್ಮಿಕರು ಮತ್ತು ಇತರರು -ವಿರುದ್ಧ- ಭಾರತ ಒಕ್ಕೂಟ, ಕಾರ್ಯದರ್ಶಿಯವರಿಂದ ಪ್ರತಿನಿಧಿತ, ಬೃಹತ್ ಕೈಗಾರಿಕಾ ಸಚಿವಾಲಯ ಮತ್ತು ಇತರರು*

ಭಾರತ ಸಂವಿಧಾನದ 226 ಹಾಗೂ 227ನೇ ಅನುಚ್ಛೇದಗಳಡಿಯಲ್ಲಿ ರಿಟ್ ಅರ್ಜಿ.

ಮಂಡ್ಯದ ನ್ಯಾಷನಲ್ ಪೇಪರ್ ಮಿಲ್ಸ್‌ನ ಕಾರ್ಮಿಕರು, ಕೇಂದ್ರ ಸರ್ಕಾರವು ದಿನಾಂಕ 05.05.2000ದಂದು ಹೊರಡಿಸಿದ ವಿಸ್ತರಿತ ಸ್ವಯಂ ನಿವೃತ್ತಿ ಯೋಜನೆ ಅಡಿಯಲ್ಲಿ ಎಲ್ಲಾ ಸೌಲಭ್ಯಗಳೊಂದಿಗೆ ಸ್ವ-ಇಚ್ಛಾ ನಿವೃತ್ತಿಯನ್ನು ಪಡೆದುಕೊಂಡಿರುತ್ತಾರೆ. ತರುವಾಯ ಕೇಂದ್ರ ಸರ್ಕಾರವು 06.11.2001ರಲ್ಲಿ ಪರಿಷ್ಕೃತ ಸ್ವ-ಇಚ್ಛಾ ನಿವೃತ್ತಿಯ ಅಧಿಕೃತ ಜ್ಞಾಪನವನ್ನು ಹೊರಡಿಸಿ, ಅದರಲ್ಲಿ 01.01.87ರ ವೇತನ ಶ್ರೇಣಿಗಳಲ್ಲಿದ್ದ ಹಗೂ 01.01.92ರ ವೇತನ ಶ್ರೇಣಿಗಳಲ್ಲಿದ್ದ ನೌಕರರಿಗೆ ಕ್ರಮವಾಗಿ ಶೇಕಡಾ 100 ಹಾಗೂ ಶೇಕಡಾ 50 ರಷ್ಟು ಅನುಗ್ರಹ ಪೂರ್ವಕ ವೇತನವನ್ನು ಹೆಚ್ಚಿಸಿತ್ತು. ಹಾಗೆಯೇ ಈ ಅಧಿಸೂಚನೆಯ ದಿನಾಂಕಕ್ಕೂ ಮೊದಲು ಬಿಡುಗಡೆಗೊಂಡ ನೌಕರರಿಗೆ ಈ ಸೌಲಭ್ಯವು ಅನ್ವಯವಾಗುವುದಿಲ್ಲವೆಂದು ಸಹಾ ಸ್ಪಷ್ಟಪಡಿಸಿತ್ತು. ಇದು ಭಾರತ ಸಂವಿಧಾನದ 14ನೇ ಅನುಚ್ಛೇದದ ಉಲ್ಲಂಘನೆಯೆಂದು ಹಾಗಾಗಿ ಈ ಸೌಲಭ್ಯವನ್ನು ತಮಗೂ ವಿಸ್ತರಿಸಬೇಕೆಂದು ಕೋರಿ ಪ್ರಸ್ತುತ ರಿಟ್ ಅಪೀಲನ್ನು ಸಲ್ಲಿಸಲಾಗಿತ್ತು.

06.11.2001ರ ಅಧಿಕೃತ ಜ್ಞಾಪನದಲ್ಲಿ ಸದರಿ ಅಧಿಕೃತ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಮೊದಲು ಸಾರ್ವಜನಿಕ ವಲಯ ಉದ್ಯಮದ ಮೂಲಕ ಈಗಾಗಲೇ ಬಿಡುಗಡೆ ಮಾಡಿದಂಥ ಉದ್ಯೋಗಿಗಳಿಗೆ ಅನ್ವಯವಾಗತಕ್ಕದ್ದಲ್ಲವೆಂಬುದನ್ನು ಸ್ಪಷ್ಟಪಡಿಸಲಾಗಿರುತ್ತದೆ. ಅರ್ಜಿದಾರರ ಪ್ರಕಾರ ಅಂಥ ಖಂಡವು ತಾರತಮ್ಯ ಪೂರಿತವಾಗಿದ್ದು, ಭಾರತ ಸಂವಿಧಾನದ 14ನೇ ಅನುಚ್ಛೇದದ ಉಲ್ಲಂಘನೆಯಾಗಿರುತ್ತದೆ.

*ರಿಟ್ ಅರ್ಜಿ ಸಂಖ್ಯೆ: 15448/2008 (ಎಸ್-ಆರ್) ಇದರೊಂದಿಗೆ ಇತರೆ, ದಿನಾಂಕ: 27ನೇ ಜುಲೈ, 2016.

ಈ ವಾದವನ್ನು ಅಂಗೀಕರಿಸಲಾಗುವುದಿಲ್ಲ. *ಎ.ಕೆ. ಬಿಂದಾಲ್ -ವಿರುದ್ಧ- ಭಾರತ ಸರ್ಕಾರ* ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು, ಮೂಲಭೂತ ಹಕ್ಕುಗಳನ್ನು ಬಿಟ್ಟುಕೊಡದಂಥ ಉದ್ಯೋಗಿಯ ಪರವಾಗಿ ಇಂಥದೇ ವಾದವನ್ನು ಪರಿಗಣಿಸುವಾಗ, ಉದ್ಯೋಗಿಯು ಸ್ವಯಂ ನಿವೃತ್ತಿ ಯೋಜನೆಯನ್ನು ಆಯ್ಕೆ ಮಾಡಿಕೊಂಡು, ಹಣವನ್ನು ಪಡೆದುಕೊಂಡು ಕಂಪನಿಯನ್ನು ಬಿಟ್ಟು ಹೋಗಿದ್ದರೂ ಕೂಡ, ಆತ ಕಂಪನಿಯ ಉದ್ಯೋಗಿಯಾಗಿದ್ದಾಗಿನ ಅವಧಿಯಲ್ಲಿ ಹಕ್ಕುಳ್ಳವನಾಗಿದ್ದ ಸಂಬಳದ ಕ್ಲೇಮಿನ ತನ್ನ ಹಕ್ಕನ್ನು ಬಿಟ್ಟು ಬಿಟ್ಟಿರುತ್ತಾನೆ ಎಂದರ್ಥವೆಂದು ಅಭಿಪ್ರಾಯಪಟ್ಟಿರುತ್ತದೆ. ಸರ್ವೋಚ್ಚ ನ್ಯಾಯಾಲಯವು 31 ರಿಂದ 34ನೇ ಪ್ಯಾರಾಗಳಲ್ಲಿ ಯಾವ ಉದ್ಯೋಗಿಗಳು, ವೇತನ ಶ್ರೇಣಿಯ ಪರಿಷ್ಕರಣೆಯನ್ನು ಆಧರಿಸಿ ತಮ್ಮ ಹಿಂದಿನ ಹಕ್ಕುಗಳಿಗೆ ಸಂಬಂಧಿಸಿದಂತೆ, ಯಾವುದೇ ರೀತಿಯ ಪ್ರತಿರೋಧವನ್ನು ತೋರದೆ ಮುಕ್ತವಾಗಿ ಸ್ವಯಂ ನಿವೃತ್ತಿ ಯೋಜನೆಯನ್ನು ಒಪ್ಪಿಕೊಂಡಿರುತ್ತಾರೋ ಅಂಥ ಉದ್ಯೋಗಿಗಳ 'ಗೋಲ್ಡನ್ ಹ್ಯಾಂಡ್ ಶೇಕ್'ನೊಂದಿಗೆ ಇಡೀ ಹಣವನ್ನು ಪಡೆದುಕೊಂಡು ಕಂಪನಿಯಿಂದ ಒಮ್ಮೆ ಹೊರ ನಡೆದ ಮೇಲೆ, ಅವರ ಇಂಥ ವಾದಗಳನ್ನು ಪುರಸ್ಕರಿಸಲಾಗುವುದಿಲ್ಲವೆಂದು ನಿರೂಪಿಸಿರುತ್ತದೆ.

ಎಂಎನ್‌ಪಿಎಂನ ಉದ್ಯೋಗಿಗಳಿಗೆ ಹಣವನ್ನು ಸಂದಾಯ ಮಾಡುವ ಮುಖ್ಯ ಉದ್ದೇಶವು, ಸ್ವಯಂ ನಿವೃತ್ತಿಯನ್ನು ಆಧರಿಸಿದ್ದು, ಅದು ಉದ್ಯೋಗದಾತ ಹಾಗೂ ಉದ್ಯೋಗಿಯ ನಡುವಿನ ಕಾನೂನು ಬದ್ಧ ಸಂಬಂಧವನ್ನು ಸಂಪೂರ್ಣವಾಗಿ ಪರಿಸಮಾಪ್ತಿಗೊಳಿಸುವಂತದ್ದಾಗಿರುತ್ತದೆ. ಒಮ್ಮೆ ಹಣ ಸಂದಾಯ ಮಾಡಿದ್ದಲ್ಲಿ, ಉದ್ಯೋಗಿಗೆ ಕಂಪನಿಯ ಉದ್ಯೋಗ ಸಮಾಪ್ತವಾಗಿರುತ್ತದೆ. ಹಿಂದಿನ ಯೋಜನೆಯಡಿಯಲ್ಲಿ ಸೇವೆಯಿಂದ ಈಗಾಗಲೇ ಬಿಡುಗಡೆಯಾಗಿರುವಂಥ ಉದ್ಯೋಗಿಗಳಿಗೆ ಇದು ಅನ್ವಯವಾಗುವುದಿಲ್ಲವೆಂದು ನಿರ್ದಿಷ್ಟವಾಗಿ ಸ್ಪಷ್ಟಪಡಿಸಿ ಕೇಂದ್ರ ಸರ್ಕಾರವು ಹೊರಡಿಸಿರುವ ತರುವಾಯದ ಅಧಿಕೃತ ಜ್ಞಾಪನವನ್ನು ಸ್ವಲ್ಪ ಮಟ್ಟಿಗೆ ಆಧರಿಸಿ, ಮತ್ತೆ ಯಾವುದೇ ರೀತಿಯ ತನ್ನ ಹಿಂದಿನ ಹಕ್ಕುಗಳಿಗೆ ಹೋರಾಡುವ ಯಾವುದೇ ಪ್ರಶ್ನೆ ಉದ್ಭವವಾಗುವುದಿಲ್ಲ.

ಅರ್ಜಿದಾರರ ಪರ ಮಾನ್ಯ ವಕೀಲರು ವಾದಿಸಿರುವ ಮತ್ತೊಂದು ವಾದವೆಂದರೆ, ತರುವಾಯದ ಅಧಿಕೃತ ಜ್ಞಾಪನವು, ಸ್ವಯಂ ನಿವೃತ್ತಿ ಯೋಜನೆಯಡಿಯಲ್ಲಿ ಸ್ವಯಂ ನಿವೃತ್ತಿ ಸೌಲಭ್ಯಕ್ಕೆ ಸಂಬಂಧಿಸಿದಂತೆ, ಉಪಬಂಧ ಕಲ್ಪಿಸುವ ಈ ಮುಂಚಿನ ಅಧಿಕೃತ

**ಜ್ಞಾಪನದ ಮಾರ್ಪಾಡಿತ ರೂಪವಾಗಿರುತ್ತದೆ ಎಂಬುದಾಗಿರುತ್ತದೆ. ಆದ್ದರಿಂದ, ಈ ಮೊದಲ ಯೋಜನೆಯನ್ನು ಮಾರ್ಪಾಡುಗೊಳಿಸಲಾದಂತೆ, ಮಾರ್ಪಾಡಿತ ಯೋಜನೆಯ ಸೌಲಭ್ಯವು ಹಳೇ ಯೋಜನೆಯಡಿಯಲ್ಲಿ ನಿವೃತ್ತಿಯನ್ನು ಆಯ್ಕೆ ಮಾಡಿಕೊಂಡಂಥ ಉದ್ಯೋಗಿಗಳಿಗೆ ಅನ್ವಯವಾಗುತ್ತದೆ ಎಂಬುದಾಗಿದೆ. ಸದರಿ ವಾದವು 06.11.2001ರ ಪರಿಷ್ಕೃತ ಅಧಿಕೃತ ಜ್ಞಾಪನದ ಸೌಲಭ್ಯವನ್ನು, ಈ ಯೋಜನೆಯಲ್ಲಿ ನಿಗಮಿತಗೊಳಿಸಿದ ವ್ಯಕ್ತ ಖಂಡದ ಮೇರೆಗೆ ಸ್ವೀಕರಿಸಿದ ಸೌಲಭ್ಯಗಳ ಮೂಲಕ ಮುಂಚಿನ ಯೋಜನೆಯಡಿಯಲ್ಲಿ ಈಗಾಗಲೇ ಬಿಡುಗಡೆಗೊಳಿಸಿದಂಥ ಉದ್ಯೋಗಿಗಳಿಗೆ ಅನ್ವಯ ಮಾಡಲಾಗುವುದಿಲ್ಲವಾದ್ದರಿಂದ ಪ್ರಸ್ತುತ ಪ್ರಕರಣದ ಸಂಗತಿಗಳು ಅನುಮತೀಯವಾಗಿರುವುದಿಲ್ಲ ಎಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ರಿಟ್ ಅರ್ಜಿಗಳನ್ನು ವಜಾಗೊಳಿಸಿದೆ.**

*ಉಲ್ಲೇಖಿಸಲಾದ ಮೊಕದ್ದಮೆಗಳು* *ಪ್ಯಾರಾಗಳಲ್ಲಿ*

1. *ಎಐಆರ್ 2003 ಎಸ್‌ಸಿ 2189*
   *ಎ.ಕೆ. ಬಿಂದಾಲ್ –ವಿರುದ್ಧ–*
   *ಕೇಂದ್ರ ಸರ್ಕಾರ.* *(ಉಲ್ಲೇ) 7*
2. *2011 ಎಐಆರ್ ಎಸ್‌ಸಿಡಬ್ಲ್ಯೂ 2132*
   *ಕೆ.ಜಿ.ಎಸ್. ಬಟ್ಟರ್ –ವಿರುದ್ಧ– ಭಾರತ ಸರ್ಕಾರ*
   *ಮತ್ತು ಮತ್ತೊಬ್ಬರು* *(ಉಲ್ಲೇ) 6*
3. *2013(2) ಎಸ್‌ಸಿಸಿ 772*
   *ಕಲ್ಲಕುರಿಚಿ ತಾಲ್ಲೂಕಿನ ನಿವೃತ್ತ ನೌಕರರ ಸಂಘ*
   *ತಮಿಳುನಾಡು ಮತ್ತು ಇತರರು –ವಿರುದ್ಧ–*
   *ತಮಿಳುನಾಡು ಸರ್ಕಾರ* *(ಉಲ್ಲೇ) 6*
4. *ಎಐಆರ್ 2006 ಎಸ್‌ಸಿ 1420*
   *ಹೆಚ್‌ಇಸಿ ಸ್ವಯಂ ನಿವೃತ್ತ ನೌಕರರ ಕ್ಷೇಮಾಭಿವೃದ್ಧಿ*
   *ಸಂಘ ಹಾಗೂ ಮತ್ತೊಬ್ಬರು – ವಿರುದ್ಧ–*
   *ಹೆವಿ ಇಂಜಿನಿಯರಿಂಗ್ ಕಾರ್ಪೊರೇಷನ್ ಲಿಮಿಟೆಡ್*
   *ಮತ್ತು ಇತರರು* *(ಉಲ್ಲೇ) 7*

ಅರ್ಜಿದಾರರ ಪರವಾಗಿ: ಶ್ರೀ ಸುಬ್ಬಾರಾವ್ ಅಂಡ್ ಕಂ. ಪರವಾಗಿ, ಶ್ರೀ ಎಂ. ನಾರಾಯಣ ಭಟ್, ವಕೀಲರು.

1ನೇ ಪ್ರತ್ಯರ್ಜಿದಾರರ ಪರ: ಶ್ರೀ ಅನ್ನಿಯನ್ ಜೋಸೆಫ್, ಸಿಜಿಸಿ.

2ನೇ ಪ್ರತ್ಯರ್ಜಿದಾರರ ಪರ: ಮೆ: ಕಿಂಗ್ ಅಂಡ್ ಪಾರ್ಟ್‌ರಿಡ್ಜ್ ಪರವಾಗಿ ಶ್ರೀ ಅರವಿಂದ್ ಮೂರ್ಚುಂಗ್, ವಕೀಲರು.

3ನೇ ಪ್ರತ್ಯರ್ಜಿದಾರರ ಪರವಾಗಿ: ಶ್ರೀ ಕೆ.ಎಸ್. ಮಹಾದೇವನ್, ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಬಿ.ಎಸ್. ಪಾಟೀಲ್:**

ಎಲ್ಲಾ ಅರ್ಜಿದಾರರು ಮಂಡ್ಯ ನ್ಯಾಷನಲ್ ಪೇಪರ್ ಮಿಲ್‌ನ (ಸಂಕ್ಷಿಪ್ತತೆಗಾಗಿ ಇನ್ನು ಮುಂದೆ ಎಂಎನ್‌ಪಿಎಂ ಎಂದು ಕರೆಯಲಾಗುತ್ತದೆ) ಉದ್ಯೋಗಿಗಳಾಗಿರುತ್ತಾರೆ. ಈ ಕಂಪನಿಯು, ಕಂಪನಿಗಳ ಅಧಿನಿಯಮದ ಉಪಬಂಧಗಳಡಿಯಲ್ಲಿ ನಿಗಮಿತವಾಗಿರುವ ಕಂಪನಿಯಾಗಿರುತ್ತದೆ. ಇದು ಹೆಚ್ಚಿನ ನಷ್ಟವನ್ನು ಅನುಭವಿಸಿರುತ್ತದೆ. ಇದರಲ್ಲಿ ಕಾರ್ಯನಿರ್ವಹಿಸುತ್ತಿರುವ ಉದ್ಯೋಗಿಗಳಿಗೆ ಕೆಲವು ಸೌಲಭ್ಯಗಳನ್ನು ವಿಸ್ತರಿಸುವ ಸಲುವಾಗಿ, ಕೇಂದ್ರ ಸರ್ಕಾರವು, ಅನುಬಂಧ–ಬಿ ಮೇರೆಗೆ ದಿನಾಂಕ 05.05.2000ದಂದು ಅಧಿಕೃತ ಜ್ಞಾಪನವನ್ನು ಹೊರಡಿಸಿರುತ್ತದೆ. ಇದು ಎಲ್ಲಾ ರೋಗಗ್ರಸ್ತ ಘಟಕಗಳಿಗೂ ಅನ್ವಯವಾಗುವ ಸ್ವಯಂ ನಿವೃತ್ತಿ ಯೋಜನೆಯಾಗಿರುತ್ತದೆ. ಸದರಿ ಯೋಜನೆಯು 05.10.1988 ಕ್ಕಿಂತ ಮುಂಚಿನ ಯೋಜನೆಯ ತಿದ್ದುಪಡಿ ರೂಪವಾಗಿರುತ್ತದೆ. ಸರ್ಕಾರವು, ಉದ್ಯೋಗಿಗಳು ಹಾಗೂ ಸಾರ್ವಜನಿಕ ವಲಯ ಉದ್ದಿಮೆಗಳೆರಡನ್ನೂ, ಅವುಗಳ ಹೆಚ್ಚಿನ ಮಾನವ ಸಂಪನ್ಮೂಲವನ್ನು ಸುವ್ಯವಸ್ಥಿತಗೊಳಿಸಲು ಹಾಗೂ ಸಮರ್ಥಗೊಳಿಸಲು ಗಮನದಲ್ಲಿಟ್ಟುಕೊಳ್ಳಬೇಕಾಗಿರುತ್ತದೆ.

2. ಈ ಪ್ರಕರಣದ ಉದ್ದೇಶಕ್ಕೆ ಸಂಬಂಧಿಸಿದಂತೆ ಸದರಿ ಯೋಜನೆಯಲ್ಲಿ (ಅನುಬಂಧ–ಬಿ)ನ ಸೂಕ್ತ ಖಂಡವು (5)ನೇ ಖಂಡವಾಗಿರುತ್ತದೆ. ಇದು ರೋಗಗ್ರಸ್ತ

ಹಾಗೂ ಕಾರ್ಯನಿರ್ವಹಿಸದ ಘಟಕಗಳು, ಬೃಹತ್ ಪ್ರಮಾಣದ ಕೈಗಾರಿಕೆಗಳ ವಿಭಾಗದ ಸ್ವಯಂ ನಿವೃತ್ತಿ ಯೋಜನೆಯನ್ನು ಅಳವಡಿಸಿಕೊಳ್ಳಬೇಕಾಗುತ್ತದೆ ಎಂಬುದನ್ನು ನಿರೂಪಿಸುತ್ತದೆ. ಅದರಂತೆ, ಸ್ವಯಂ ನಿವೃತ್ತಿ ಯೋಜನೆಯನ್ನು ಗುಜರಾತ್ ಮಾದರಿಯಲ್ಲಿ ರೂಪಿಸಲಾಗಿರುತ್ತದೆ. ಆದಾಗ್ಯೂ, ಈ ಯೋಜನೆಯ ಆರಂಭದ ದಿನಾಂಕದಿಂದ ಮೂರು ತಿಂಗಳೊಳಗೆ ಸ್ವಯಂ ನಿವೃತ್ತಿ ಯೋಜನೆಯನ್ನು ಆಯ್ಕೆ ಮಾಡಿಕೊಳ್ಳಲು ಉದ್ಯೋಗಿಗಳನ್ನು ಅಗತ್ಯಪಡಿಸಿದ್ದು, ಇದಕ್ಕೆ ತಪ್ಪಿದ್ದಲ್ಲಿ, ಅವರು ಮಿತವ್ಯಯದ ಪರಿಹಾರಕ್ಕೆ ಸಂಬಂಧಿಸಿದಂತೆ ಮಾತ್ರ ಅರ್ಹರಾಗಿರುತ್ತಾರೆ.

3. 3ನೇ ಪ್ರತ್ಯರ್ಜಿದಾರ ಕಂಪನಿಗೆ ಈ ಯೋಜನೆಯನ್ನು ಅನ್ವಯವಾಗುವಂತೆ ಮಾಡಿದಲ್ಲಿ, ಎಲ್ಲಾ ಉದ್ಯೋಗಿಗಳು ಅವರನ್ನು ಪ್ರತಿನಿಧಿಸುವ ಸಂಘದಿಂದಾಗಲೀ ಅಥವಾ ಅವರೇ ಸ್ವಂತವಾಗಿಯಾಗಲೀ, 05.05.2000ದಿಂದ ಮೂರು ತಿಂಗಳೊಳಗೆ ಅರ್ಜಿ ಸಲ್ಲಿಸುವ ಮೂಲಕ ಸ್ವಯಂ ನಿವೃತ್ತಿ ಸೌಲಭ್ಯವನ್ನು ಕೋರಬಹುದಾಗಿರುತ್ತದೆ. ಹಾಗಾಗಿ, ಇದು 05.08.2000 ರಂದು ಅಥವಾ ಮೊದಲು, ಎಂಎನ್‌ಪಿಎಂನ ಎಲ್ಲಾ ಉದ್ಯೋಗಿಗಳು ಯೋಜನೆಯ ಸೌಲಭ್ಯವನ್ನು ಪಡೆಯಲು ಕೋರಿಕೆ ಸಲ್ಲಿಸಿರುತ್ತಾರೆಂಬುದನ್ನು ಸೂಚಿಸುತ್ತದೆ. ವಾಸ್ತವವಾಗಿ, ಅವರು ಯೋಜನೆಯ ಪ್ರಕಾರ ಹಣಕಾಸಿನ ಸೌಲಭ್ಯದ ಸಂದಾಯಕ್ಕೆ ನಿಶ್ಚಿತವಾಗಿಯೂ ಅರ್ಹರಾಗಿರುತ್ತಾರೆ.

4. ಭಾರತ ಸರ್ಕಾರವು ಹೊರಡಿಸಿದ ಅಧಿಕೃತ ಜ್ಞಾಪನದ ಮೂಲಕ 06.11.2001 ರಂದು ಯೋಜನೆಯನ್ನು ತತ್‌ಕ್ಷಣ ಜಾರಿಗೊಳಿಸುವುದರೊಂದಿಗೆ ಪರಿಷ್ಕರಿಸಲಾಗಿರುತ್ತದೆ. ಕೇಂದ್ರ ಪಿಎಸ್‌ಯುಗಳಿಗೆ ಸಂಬಂಧಿಸಿದಂತೆ, ಪರಿಷ್ಕೃತ ಸ್ವಯಂ ನಿವೃತ್ತಿ ಯೋಜನೆಯನ್ನು ದಿನಾಂಕ 05.05.2000ದ ಅಧಿಕೃತ ಜ್ಞಾಪನದ ಪ್ರಕಾರ ಪರಿಚಯಿಸಲಾಗಿರುತ್ತದೆ. ಅಧಿಕೃತ ಜ್ಞಾಪನದ (ಎ) ಖಂಡವು ಈ ಮುಂದಿನಂತೆ ಹೇಳುತ್ತದೆ.

> "01.01.87 ಹಾಗೂ 01.01.92ರ ಹಂತಗಳಲ್ಲಿನ ವೇತನ ಶ್ರೇಣಿ ಕುರಿತಂತೆ ಉದ್ಯೋಗಿಗಳ ಸಂಬಂಧದಲ್ಲಿನ ಅನುಗ್ರಹ ಪೂರ್ವಕ ವೇತನವನ್ನು ವಿಸ್ತೃತ ಯೋಜನೆಗನುಸಾರವಾಗಿ, ಉದ್ಯೋಗಿಗಳು

ಅವರ ಈಗಿರುವ ವೇತನ ಶ್ರೇಣಿಗಳ ಮೇಲೆ ಲೆಕ್ಕಹಾಕಲಾಗಿದ್ದು, ಅದನ್ನು ಅನುಕ್ರಮವಾಗಿ ಶೇ.100 ಹಾಗೂ ಶೇ.50 ರಷ್ಟು ಹೆಚ್ಚಿಸತಕ್ಕದ್ದು.

(4) ಹಾಗೂ (5)ನೇ ಖಂಡಗಳನ್ನು ಈ ಮುಂದಿನಂತೆ ಓದಲಾಗಿದೆ:

"4. ಈ ಅಧಿಕೃತ ಜ್ಞಾಪನವನ್ನು ಹೊರಡಿಸಿದ ದಿನಾಂಕಕ್ಕೆ ಪೂರ್ವದಲ್ಲಿ ಪಿಎಸ್‌ಯುಗಳಿಂದ ಈಗಾಗಲೇ ಬಿಡುಗಡೆ ಹೊಂದಿದ್ದಂಥ ಉದ್ಯೋಗಿಗಳು ಮಾರ್ಪಾಡಿತ ಯೋಜನೆಯಡಿಯಲ್ಲಿ ಒಳಗೊಳ್ಳತಕ್ಕದ್ದಲ್ಲ;"

5. ಆಡಳಿತಾತ್ಮಕ ಮಂತ್ರಾಲಯಗಳು/ಇಲಾಖೆಗಳನ್ನು ಅವರ ಆಡಳಿತಾತ್ಮಕ ನಿಯಂತ್ರಣದಡಿಯಲ್ಲಿರುವ ಸಾರ್ವಜನಿಕ ವಲಯ ಉದ್ಯಮಗಳ ಗಮನಕ್ಕೆ ಮಾರ್ಪಾಡಿತ ವಿಆರ್‌ಎಸ್/ವಿಎಸ್‌ಎಸ್ ಅನ್ನು ತರಲು ಅಗತ್ಯಪಡಿಸಿ, ಯೋಜನೆಯ ಉಪಬಂಧಗಳ ಕಠಿಣ ಅನುಪಾಲನೆಯನ್ನು ಖಚಿತ ಪಡಿಸಬೇಕು."

5. ಹಾಗಾಗಿ, 01.01.1987 ರಂದು ಇದ್ದಂತೆ ಅಂಗೀಕಾರಾರ್ಹ ವೇತನ ಶ್ರೇಣಿಯನ್ನು ಹೊಂದಿದ್ದಂಥ ಉದ್ಯೋಗಿಗಳ ಸಂಬಂಧದಲ್ಲಿ ಸಂದಾಯಮಾಡಬಹುದಾದ ಅನುಗ್ರಹ ಪೂರ್ವಕ ಮೊಬಲಗನ್ನು ಶೇ.100ಕ್ಕೆ ವಿಸ್ತರಿಸಲಾಗಿರುತ್ತದೆಂಬುದು ಹಾಗೂ 01.01.1992 ರಂದು ಇದ್ದಂತೆ ಸ್ವೀಕರಿಸಿದ ಪರಿಷ್ಕೃತ ವೇತನ ಶ್ರೇಣಿಯನ್ನು ಸ್ವೀಕರಿಸುತ್ತಿದ್ದಂಥ ಉದ್ಯೋಗಿಗಳ ಸಂಬಂಧದಲ್ಲಿ ಸಂದಾಯ ಮಾಡಬಹುದಾದ ಅನುಗ್ರಹ ಪೂರ್ವಕ ಮೊಬಲಗನ್ನು ಶೇ.50ಕ್ಕೆ ವಿಸ್ತರಿಸಲಾಗಿರುತ್ತದೆಂಬುದು ಸ್ಪಷ್ಟವಾಗಿರುತ್ತದೆ. 06.11.2001ರ ಅಧಿಕೃತ ಜ್ಞಾಪನವನ್ನು ಹೊರಡಿಸಿದ ದಿನಾಂಕಕ್ಕೆ ಮೊದಲು ಪಿಎಸ್‌ಯು ಯಿಂದ ಈಗಾಗಲೇ ಬಿಡುಗಡೆ ಹೊಂದಿದಂಥ ಉದ್ಯೋಗಿಗಳು ಮಾರ್ಪಾಡಿತ ಯೋಜನೆಯಡಿಯಲ್ಲಿ ಒಳಗೊಳ್ಳತಕ್ಕದ್ದಲ್ಲವೆಂಬುದನ್ನು (4)ನೇ ಖಂಡದಲ್ಲಿ ನಿರ್ದಿಷ್ಟವಾಗಿ ಸ್ಪಷ್ಟಪಡಿಸಿದೆ.

6. ಈ ರಿಟ್ ಅರ್ಜಿಗಳಲ್ಲಿನ ಅರ್ಜಿದಾರರ ವಾದವು, ಅವರನ್ನು 06.11.2001ನೇ ದಿನಾಂಕದ ಅಧಿಕೃತ ಜ್ಞಾಪನದ ದಿನಾಂಕಕ್ಕೆ ಮೊದಲು ಬಿಡುಗಡೆ ಮಾಡಿದ್ದಾಗ್ಯೂ, ಅನುಕ್ರಮವಾಗಿ ಶೇ.100 ಹಾಗೂ ಶೇ.50 ರಷ್ಟು ವಿಸ್ತೃತ ಅನುಗ್ರಹ ಪೂರ್ವಕ ಸಂದಾಯದ ವಿಷಯದಲ್ಲಿ ಪರಿಷ್ಕೃತ ಅಧಿಕೃತ ಜ್ಞಾಪನದ ಸೌಲಭ್ಯವನ್ನು ಅದರಂತೆ ಅರ್ಜಿದಾರರಿಗೆ ಅನ್ವಯವಾಗುತ್ತದೆಂಬುದಾಗಿರುತ್ತದೆ. ಅವರ ಪ್ರಕಾರ, 06.11.2001ನೇ ಅಧಿಕೃತ ಜ್ಞಾಪನದ (4)ನೇ ಖಂಡವು, ಭಾರತ ಸಂವಿಧಾನದ 14ನೇ ಅನುಚ್ಛೇದವನ್ನು ವಿವೇಚನಾಧೀನ ಹಾಗೂ ಉಲ್ಲಂಘನೀಯವಾಗಿರುವುದರಿಂದ ಕಾನೂನು ಬಾಹಿರವಾಗಿರುತ್ತದೆ. ಈ ವಾದಕ್ಕೆ ಪೂರಕವಾಗಿ, ಅರ್ಜಿದಾರರ ಪರ ಮಾನ್ಯ ವಕೀಲರು, ಸರ್ವೋಚ್ಚ ನ್ಯಾಯಾಲಯದ ಈ ಮುಂದಿನ ತೀರ್ಪುಗಳನ್ನು ಉದಾಹರಿಸಿರುತ್ತದೆ.

(ಎ) ***ಎ.ಕೆ. ಬಿಂದಾಲ್ –ವಿರುದ್ಧ– ಭಾರತ ಸರ್ಕಾರ***[1],

(ಬಿ) ***ಕೆ.ಜೆ.ಎಸ್. ಬಟ್ಟರ್ –ವಿರುದ್ಧ– ಭಾರತ ಸರ್ಕಾರ ಹಾಗೂ ಮತ್ತೊಬ್ಬರು***[2] ಮತ್ತು

(ಸಿ) ***ಕಲ್ಲಕುರಿಚಿ ತಾಲ್ಲೂಕಿನ ನಿವೃತ್ತ ನೌಕರರ ಸಂಘ, ತಮಿಳುನಾಡು ಹಾಗೂ ಇತರರು –ವಿರುದ್ಧ– ತಮಿಳುನಾಡು ಸರ್ಕಾರ***[3].

7. ***ಹೆಚ್‌ಇಸಿ ಸ್ವಯಂ ನಿವೃತ್ತ ನೌಕರರ ಕ್ಷೇಮಾಭಿವೃದ್ಧಿ ಸಂಘ ಹಾಗೂ ಮತ್ತೊಬ್ಬರು –ವಿರುದ್ಧ– ಹೆವಿ ಇಂಜಿನಿಯರಿಂಗ್ ಕಾರ್ಪೋರೇಷನ್ ಲಿಮಿಟೆಡ್ ಮತ್ತು ಇತರರು***[4], ಪ್ರಕರಣದಲ್ಲಿನ ತೀರ್ಪಿಗೆ ನ್ಯಾಯಾಲಯದ ಗಮನವನ್ನು ಸೆಳೆಯುವುದರ ಜೊತೆಗೆ ***ಎ.ಕೆ. ಬಿಂದಾಲ್ –ವಿರುದ್ಧ– ಕೇಂದ್ರ ಸರ್ಕಾರ (ಮೇಲಿನ)***, ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಉದಾಹರಿಸಿ 2ನೇ ಪ್ರತ್ಯರ್ಜಿದಾರರ ಪರ

1. ಎಐಆರ್ 2003 ಎಸ್‌ಸಿ 2189
2. ಎಐಆರ್ 2003 ಎಸ್‌ಸಿ 2189:2011 ಎಐಆರ್ ಎಸ್‌ಸಿಡಬ್ಲ್ಯೂ 2132
3. 2013(2) ಎಸ್‌ಸಿಸಿ 772
4. ಎಐಆರ್ 2006 ಎಸ್‌ಸಿ 1420

ಮಾನ್ಯ ನ್ಯಾಯವಾದಿಗಳು, 06.11.2001ನೇ ದಿನಾಂಕದ ಅಧಿಕೃತ ಜ್ಞಾಪನದ ಮೇರೆಗೆ ಕೇಂದ್ರ ಸರ್ಕಾರವು ಹೊರಡಿಸಿದ ಪರಿಷ್ಕೃತ ಸ್ವಯಂ ನಿವೃತ್ತಿ ಯೋಜನೆಯ ಸೌಲಭ್ಯವು, ದೀರ್ಘಕಾಲದ ತರುವಾಯ ಸ್ವಯಂ ನಿವೃತ್ತಿಯನ್ನು ಆಯ್ಕೆ ಮಾಡಿಕೊಂಡಂಥ ಹಾಗು ಎಂಎಸ್‌ಪಿಎಂನ ಸೇವೆಯಿಂದ ಹೊರಬಂದಂಥ ಅರ್ಜಿದಾರರಿಗೆ ಇದು ಅನ್ವಯವಾಗುವುದಿಲ್ಲ ಹಾಗು ಅರ್ಜಿದಾರರು ಇದನ್ನು ಅವಲಂಬಿಸಿ ಯಾವುದೇ ಹಕ್ಕನ್ನು ಕ್ಲೇಮು ಮಾಡುವಂತಿಲ್ಲವೆಂದು ವಾದಿಸಿರುತ್ತಾರೆ.

8. ಇಬ್ಬರೂ ಪಕ್ಷಕಾರರ ಪರ ಮಾನ್ಯ ವಕೀಲರು ವಾದಿಸಿದ ವಾದವನ್ನು ಆಲಿಸಿದ ತರುವಾಯ ಹಾಗು ದಾಖಲೆಯ ಮೇಲಿನ ಇಡೀ ಸಾಕ್ಷ್ಯಧಾರಗಳನ್ನು ಎಚ್ಚರಿಕೆಯಿಂದ ಪರಿಗಣಿಸಿದ ಮೇಲೆ, ಅವು ಅರ್ಜಿದಾರರು ಕಾರ್ಯ ನಿರ್ವಹಿಸುತ್ತಿದ್ದಂಥ ಎಂಎಸ್‌ಪಿಎಂ ನಷ್ಟವನ್ನು ಅನುಭವಿಸುತ್ತಿದ್ದ ಸಂಸ್ಥೆಯೆಂಬುದನ್ನು ರುಜುವಾತುಪಡಿಸಿರುತ್ತವೆ. ಕಂಪನಿಗೆ ಪದೇ ಪದೇ ನಷ್ಟ ಉಂಟಾಗುತ್ತಿದ್ದುದರಿಂದ ಸಮಾಪನ ಕ್ರಮವನ್ನು ತೆಗೆದುಕೊಳ್ಳಲಾಗಿರುತ್ತದೆ. ಅಂತಿಮವಾಗಿ ಕಂಪನಿಯನ್ನು ಸಮಾಪನಗೊಳಿಸಲಾಯಿತೆಂದು ನ್ಯಾಯಾಲಯದಲ್ಲಿ ಹೇಳಲಾಗಿರುತ್ತದೆ. ಕಂಪನಿಗೆ ಉಂಟಾದ ನಷ್ಟದ ಹಿನ್ನೆಲೆಯಲ್ಲಿ, ಕಂಪನಿಯಲ್ಲಿನ ಉದ್ಯೋಗನಿರತ ಉದ್ಯೋಗಿಗಳು, ಅನುಬಂಧ–ಬಿ ಯಲ್ಲಿ ಹಾಜರುಪಡಿಸಿದ ಭಾರತ ಸರ್ಕಾರವು ಹೊರಡಿಸಿದ 05.05.2000 ದಿನಾಂಕದ ಅಧಿಕೃತ ಜ್ಞಾಪನದ ನಿಬಂಧನೆಗಳಲ್ಲಿ ಹಾಗು ಸೂಕ್ತ ಕಾಲಾವಧಿಯಲ್ಲಿ ಚಾಲ್ತಿಯಲ್ಲಿರುವ ಯೋಜನೆಯ ಮೇರೆಗೆ ಸ್ವಯಂ ನಿವೃತ್ತಿ ಯೋಜನೆಯನ್ನು ಉಪಯೋಗಿಸಿಕೊಳ್ಳಲು ಆಹ್ವಾನಿಸಲಾಗಿರುತ್ತದೆ. ಸದರಿ ಯೋಜನೆಯ ಮೇರೆಗೆ (5)ನೇ ಖಂಡದ ಅನುಸಾರವಾಗಿ ಉದ್ಯೋಗಿಗಳನ್ನು ಸ್ವಯಂ ನಿವೃತ್ತಿ ಯೋಜನೆಯ ಅವಕಾಶ ಕಲ್ಪಿಸಿದ ದಿನಾಂಕದಿಂದ ಮೂರು ತಿಂಗಳ ಒಳಗೆ ಸ್ವಯಂ ನಿವೃತ್ತಿ ಯೋಜನೆಯನ್ನು ಆಯ್ಕೆ ಮಾಡಿಕೊಳ್ಳಲು ಅಗತ್ಯಪಡಿಸಲಾಗಿದ್ದು, ಇದಕ್ಕೆ ತಪ್ಪಿದ್ದಲ್ಲಿ, ಅವರುಗಳು ಕೆಲಸದಿಂದ ತೆಗೆದು ಹಾಕಿದ ಬಗ್ಗೆ ನಷ್ಟ ಪರಿಹಾರಕ್ಕೆ ಅರ್ಹರಾಗಿರುತ್ತಾರೆಯೇ ಹೊರತು ಸ್ವಯಂ ನಿವೃತ್ತಿ ಸೌಲಭ್ಯಕ್ಕಾಗಿ ಅರ್ಹರಿರುವುದಿಲ್ಲ.

9. ಎಂಎನ್‌ಪಿಎಂನ ಎಲ್ಲಾ ಉದ್ಯೋಗಿಗಳು ಮೂರು ತಿಂಗಳ ಅವಧಿಯೊಳಗಿನ ಸ್ವಯಂ ನಿವೃತ್ತಿ ಯೋಜನೆಗೆ ಅರ್ಜಿ ಸಲ್ಲಿಸುವ ಮೂಲಕ ಸದರಿ ಯೋಜನೆಯ ಸೌಲಭ್ಯವನ್ನು ಆಯ್ಕೆ ಮಾಡಿಕೊಂಡಿರುತ್ತಾರೆ. ಸದರಿ ಯೋಜನೆಯಡಿಯಲ್ಲಿ ಸಂದಾಯ ಮಾಡಬಹುದಾದ ಸೌಲಭ್ಯವನ್ನು ಅವರು ಸ್ವೀಕರಿಸಿ, ಕಂಪನಿಯಿಂದ ಹೊರನಡೆದಿರುತ್ತಾರೆ. ಆ ತರುವಾಯ, ಕೇಂದ್ರ ಸರ್ಕಾರವು, 06.11.2001ರ ಮತ್ತೊಂದು ಅಧಿಕೃತ ಜ್ಞಾಪನವನ್ನು ಹೊರಡಿಸುವ ಮೂಲಕ ಸ್ವಯಂ ನಿವೃತ್ತಿ ಯೋಜನೆಯನ್ನು ಪರಿಷ್ಕರಿಸಿದಾಗ, ಅನುಗ್ರಹ ಪೂರ್ವಕ ಸಂದಾಯವು ದಿನಾಂಕ 01.01.1987 ರಂದಿನಂತೆ ಅನುಮತೀಯವಾದ ವೇತನ ಶ್ರೇಣಿಗಳಲ್ಲಿದ್ದಂಥ ವ್ಯಕ್ತಿಗಳಿಗೆ ಶೇ.100ರವರೆಗೂ ಹಾಗೂ ದಿನಾಂಕ 01.01.1992 ರಂದು ಇದ್ದಂತೆ ಅನುಮತೀಯವಾದ ವೇತನ ಶ್ರೇಣಿಗಳಲ್ಲಿದ್ದಂಥ ಉದ್ಯೋಗಿಗಳಿಗೆ ಶೇ.50 ರಷ್ಟನ್ನು ವಿಸ್ತರಿಸಲಾಗಿದ್ದು, ಅರ್ಜಿದಾರರು ದಿನಾಂಕ 06.11.2001ರ ಮಾರ್ಪಾಡಿತ ಅಧಿಕೃತ ಜ್ಞಾಪನದ ನಿಬಂಧನೆಗಳಲ್ಲಿನ ವಿಸ್ತೃತ ಅನುಗ್ರಹ ಪೂರ್ವಕ ಮೊಬಲಗಿನ ಸಂದಾಯಕ್ಕೆ ಕ್ಲೇಮು ಮಾಡಿರುತ್ತಾರೆ.

10. 06.11.2001ರ ಅಧಿಕೃತ ಜ್ಞಾಪನದಲ್ಲಿ ಸದರಿ ಅಧಿಕೃತ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಮೊದಲು ಸಾರ್ವಜನಿಕ ವಲಯ ಉದ್ಯಮದ ಮೂಲಕ ಈಗಾಗಲೇ ಬಿಡುಗಡೆ ಮಾಡಿದಂಥ ಉದ್ಯೋಗಿಗಳಿಗೆ ಅನ್ವಯವಾಗತಕ್ಕದ್ದಲ್ಲವೆಂಬುದನ್ನು ಸ್ಪಷ್ಟಪಡಿಸಲಾಗಿರುತ್ತದೆ. ಅರ್ಜಿದಾರರ ಪ್ರಕಾರ ಅಂಥ ಖಂಡವು ತಾರತಮ್ಯ ಪೂರಿತವಾಗಿದ್ದು, ಭಾರತ ಸಂವಿಧಾನದ 14ನೇ ಅನುಚ್ಛೇದದ ಉಲ್ಲಂಘನೆಯಾಗಿರುತ್ತದೆ. ಈ ವಾದವನ್ನು ಅಂಗೀಕರಿಸಲಾಗುವುದಿಲ್ಲ. ***ಎ.ಕೆ. ಬಿಂದಾಲ್ –ವಿರುದ್ಧ– ಭಾರತ ಸರ್ಕಾರ*** (ಮೇಲಿನ) ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು, ಮೂಲಭೂತ ಹಕ್ಕುಗಳನ್ನು ಬಿಟ್ಟುಕೊಡದಂಥ ಉದ್ಯೋಗಿಯ ಪರವಾಗಿ ಇಂಥದೇ ವಾದವನ್ನು ಪರಿಗಣಿಸುವಾಗ, ಉದ್ಯೋಗಿಯು ಸ್ವಯಂ ನಿವೃತ್ತಿ ಯೋಜನೆಯನ್ನು ಆಯ್ಕೆ ಮಾಡಿಕೊಂಡು, ಹಣವನ್ನು ಪಡೆದುಕೊಂಡು ಕಂಪನಿಯನ್ನು ಬಿಟ್ಟು ಹೋಗಿದ್ದರೂ ಕೂಡ, ಆತ ಕಂಪನಿಯ ಉದ್ಯೋಗಿಯಾಗಿದ್ದಾಗಿನ ಅವಧಿಯಲ್ಲಿ ಹಕ್ಕುಳ್ಳವನಾಗಿದ್ದ ಸಂಬಳದ ಕ್ಲೇಮಿನ ತನ್ನ ಹಕ್ಕನ್ನು ಬಿಟ್ಟು ಬಿಟ್ಟಿರುತ್ತಾನೆ ಎಂದರ್ಥವೆಂದು ಅಭಿಪ್ರಾಯಪಟ್ಟಿರುತ್ತದೆ. ಸರ್ವೋಚ್ಚ ನ್ಯಾಯಾಲಯವು

31 ರಿಂದ 34ನೇ ಪ್ಯಾರಾಗಳಲ್ಲಿ ಯಾವ ಉದ್ಯೋಗಿಗಳು, ವೇತನ ಶ್ರೇಣಿಯ ಪರಿಷ್ಕರಣೆಯನ್ನು ಆಧರಿಸಿ ತಮ್ಮ ಹಿಂದಿನ ಹಕ್ಕುಗಳಿಗೆ ಸಂಬಂಧಿಸಿದಂತೆ, ಯಾವುದೇ ರೀತಿಯ ಪ್ರತಿರೋಧವನ್ನು ತೋರದೆ ಮುಕ್ತವಾಗಿ ಸ್ವಯಂ ನಿವೃತ್ತಿ ಯೋಜನೆಯನ್ನು ಒಪ್ಪಿಕೊಂಡಿರುತ್ತಾರೋ ಅಂಥ ಉದ್ಯೋಗಿಗಳ 'ಗೋಲ್ಡನ್ ಹ್ಯಾಂಡ್ ಶೇಕ್'ನೊಂದಿಗೆ ಇಡೀ ಹಣವನ್ನು ಪಡೆದುಕೊಂಡು ಕಂಪನಿಯಿಂದ ಒಮ್ಮೆ ಹೊರ ನಡೆದ ಮೇಲೆ ಅವರ ಇಂಥ ವಾದಗಳನ್ನು ಪುರಸ್ಕರಿಸಲಾಗುವುದಿಲ್ಲವೆಂದು ನಿರೂಪಿಸಿರುತ್ತದೆ.

11. ಎಂಎನ್‌ಪಿಎಂನ ಉದ್ಯೋಗಿಗಳಿಗೆ ಹಣವನ್ನು ಸಂದಾಯ ಮಾಡುವ ಮುಖ್ಯ ಉದ್ದೇಶವು, ಸ್ವಯಂ ನಿವೃತ್ತಿಯನ್ನು ಆಧರಿಸಿದ್ದು, ಅದು ಉದ್ಯೋಗದಾತ ಹಾಗು ಉದ್ಯೋಗಿಯ ನಡುವಿನ ಕಾನೂನು ಬದ್ಧ ಸಂಬಂಧವನ್ನು ಸಂಪೂರ್ಣವಾಗಿ ಪರಿಸಮಾಪ್ತಿಗೊಳಿಸವಂತದ್ದಾಗಿರುತ್ತದೆ. ಒಮ್ಮೆ ಹಣ ಸಂದಾಯ ಮಾಡಿದ್ದಲ್ಲಿ, ಉದ್ಯೋಗಿಗೆ ಕಂಪನಿಯ ಉದ್ಯೋಗ ಸಮಾಪ್ತವಾಗಿರುತ್ತದೆ. ಹಿಂದಿನ ಯೋಜನೆಯಡಿಯಲ್ಲಿ ಸೇವೆಯಿಂದ ಈಗಾಗಲೇ ಬಿಡುಗಡೆಯಾಗಿರುವಂಥ ಉದ್ಯೋಗಿಗಳಿಗೆ ಇದು ಅನ್ವಯವಾಗುವುದಿಲ್ಲವೆಂದು ನಿರ್ದಿಷ್ಟವಾಗಿ ಸ್ಪಷ್ಟಪಡಿಸಿ ಕೇಂದ್ರ ಸರ್ಕಾರವು ಹೊರಡಿಸಿರುವ ತರುವಾಯದ ಅಧಿಕೃತ ಜ್ಞಾಪನವನ್ನು ಸ್ವಲ್ಪ ಮಟ್ಟಿಗೆ ಆಧರಿಸಿ, ಮತ್ತೆ ಯಾವುದೇ ರೀತಿಯ ತನ್ನ ಹಿಂದಿನ ಹಕ್ಕುಗಳಿಗೆ ಹೋರಾಡುವ ಯಾವುದೇ ಪ್ರಶ್ನೆ ಉದ್ಭವವಾಗುವುದಿಲ್ಲ.

12. ಪ್ರಸ್ತುತ ಪ್ರಕರಣದಲ್ಲಿ ವಾದಿಸಲಾದಂತೆ ವೇತನ ಶ್ರೇಣಿಯ ಪರಿಷ್ಕರಣೆಯೊಂದಿಗೆ ಅವರ ಕುಂದುಕೊರತೆಯನ್ನು ಅರ್ಜಿದಾರರು ಪ್ರಶ್ನಿಸಿದಲ್ಲಿ, ಅನುಬಂಧ–ಸಿ ಮೇರೆಗೆ ಹೊರಡಿಸಿದ ತರುವಾಯದ ಅಧಿಕೃತ ಜ್ಞಾಪನದ ಪ್ರಕಾರ ಸೌಲಭ್ಯಗಳನ್ನು ಕೋರುವ ಯಾವುದೇ ಹಕ್ಕಿನೊಂದಿಗೆ ಅದು ಮರೆಯಾಗುವುದಿಲ್ಲ. ***ಕೆ.ಜೆ.ಎಸ್. ಬಟ್ಟರ್ –ವಿರುದ್ಧ– ಭಾರತ ಸರ್ಕಾರ ಹಾಗು ಮತ್ತೊಬ್ಬರು (ಮೇಲಿನ)*** ಪ್ರಕರಣದಲ್ಲಿನ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಅರ್ಜಿದಾರರ ಪರ ಮಾನ್ಯ ವಕೀಲರು ಉದಾಹರಿಸಿದ್ದು, ಸದರಿ ತೀರ್ಪು ಪ್ರಸ್ತುತ ಪ್ರಕರಣದಲ್ಲಿ ಪ್ರಸ್ತಾಪಿಸಲಾದ ಪ್ರಶ್ನೆಗಳು ಹಾಗು ಒಳಗೊಂಡ ವಾಸ್ತವಾಂಶಗಳು ಹಾಗು ಸಂದರ್ಭಗಳಿಗೆ

ವಿರುದ್ಧವಾಗಿರುವುದಿಲ್ಲ. ಆ ಪ್ರಕರಣವು ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತರಾಗಿರುವ ಸೇನಾಧಿಕಾರಿಯ ಪ್ರಕರಣವಾಗಿದ್ದು, ಅದರಲ್ಲಿ, ಅವರು ತಮ್ಮ ನಿವೃತ್ತಿಯ ತರುವಾಯ ಹೊರಡಿಸಲಾಗಿರುವಂಥ ಸುತ್ತೋಲೆಗಳಿಂದ ಕೊಡ ಮಾಡಿರುವ ಸೌಲಭ್ಯಗಳನ್ನು ಕೋರಿರುತ್ತಾರೆ. ಆ ಪ್ರಕರಣವು, ಸ್ವಯಂ ನಿವೃತ್ತಿ ಯೋಜನೆಯನ್ನು ಆಯ್ಕೆ ಮಾಡಿಕೊಂಡ ರೋಗಗ್ರಸ್ತ ಕಂಪನಿಯ ಉದ್ಯೋಗಿಗೆ ಹಾಗು ಎಲ್ಲಾ ಸೌಲಭ್ಯಗಳನ್ನು ಒಪ್ಪಿಕೊಂಡು ಕಂಪನಿಯೊಂದಿಗೆ ಸಂಬಂಧವನ್ನು ಹೊಂದಿರುವಂಥ ಉದ್ಯೋಗಿಗೆ ಸಂಬಂಧಿಸಿದ್ದಾಗಿರುವುದಿಲ್ಲ. ಅರ್ಜಿದಾರರು ಉದಾಹರಿಸಿರುವ ***ಕಲ್ಲಕುರ್ಚಿ ತಾಲ್ಲೂಕು ನಿವೃತ್ತ ನೌಕರರ ಸಂಘ, ತಮಿಳುನಾಡು ಹಾಗು ಇತರರು -ವಿರುದ್ಧ- ತಮಿಳುನಾಡು ಸರ್ಕಾರ*** (ಮೇಲಿನ) ಪ್ರಕರಣವೂ ಸಹ ಪ್ರಸ್ತುತ ಪ್ರಕರಣದ ವಾಸ್ತವಾಂಶಗಳಿಗೆ ಅನ್ವಯವಾಗುವುದಿಲ್ಲ.

13. ಅರ್ಜಿದಾರರ ಪರ ಮಾನ್ಯ ವಕೀಲರು ವಾದಿಸಿರುವ ಮತ್ತೊಂದು ವಾದವೆಂದರೆ, ತರುವಾಯದ ಅಧಿಕೃತ ಜ್ಞಾಪನವು, ಸ್ವಯಂ ನಿವೃತ್ತಿ ಯೋಜನೆಯಡಿಯಲ್ಲಿ ಸ್ವಯಂ ನಿವೃತ್ತಿ ಸೌಲಭ್ಯಕ್ಕೆ ಸಂಬಂಧಿಸಿದಂತೆ, ಉಪಬಂಧ ಕಲ್ಪಿಸುವ ಈ ಮುಂಚಿನ ಅಧಿಕೃತ ಜ್ಞಾಪನದ ಮಾರ್ಪಾಡಿತ ರೂಪವಾಗಿರುತ್ತದೆ ಎಂಬುದಾಗಿರುತ್ತದೆ. ಆದ್ದರಿಂದ, ಈ ಮೊದಲ ಯೋಜನೆಯನ್ನು ಮಾರ್ಪಾಡುಗೊಳಿಸಲಾದಂತೆ, ಮಾರ್ಪಾಡಿತ ಯೋಜನೆಯ ಸೌಲಭ್ಯವು ಹಳೇ ಯೋಜನೆಯಡಿಯಲ್ಲಿ ನಿವೃತ್ತಿಯನ್ನು ಆಯ್ಕೆ ಮಾಡಿಕೊಂಡಂಥ ಉದ್ಯೋಗಿಗಳಿಗೆ ಅನ್ವಯವಾಗುತ್ತದೆ ಎಂಬುದಾಗಿದೆ. ಸದರಿ ವಾದವು 06.11.2001ರ ಪರಿಷ್ಕೃತ ಅಧಿಕೃತ ಜ್ಞಾಪನದ ಸೌಲಭ್ಯವನ್ನು, ಈ ಯೋಜನೆಯಲ್ಲಿ ನಿಗಮಿತಗೊಳಿಸಿದ ವ್ಯಕ್ತ ಖಂಡದ ಮೇರೆಗೆ ಸ್ವೀಕರಿಸಿದ ಸೌಲಭ್ಯಗಳ ಮೂಲಕ ಮುಂಚಿನ ಯೋಜನೆಯಡಿಯಲ್ಲಿ ಈಗಾಗಲೇ ಬಿಡುಗಡೆಗೊಳಿಸಿದಂಥ ಉದ್ಯೋಗಿಗಳಿಗೆ ಅನ್ವಯ ಮಾಡಲಾಗುವುದಿಲ್ಲವಾದ್ದರಿಂದ ಪ್ರಸ್ತುತ ಪ್ರಕರಣದ ಸಂಗತಿಗಳು ಅನುಮತೀಯವಾಗಿರುವುದಿಲ್ಲ.

ಹಾಗಾಗಿ ಸಲ್ಲಿಸಿರುವ ಅರ್ಜಿಗಳಲ್ಲಿನ ವಾದಗಳಲ್ಲಿ ಹುರುಳಿಲ್ಲದಿರುವುದರಿಂದ, ಸದರಿ ಅರ್ಜಿಗಳನ್ನು ವಜಾಗೊಳಿಸಲಾಗಿರುತ್ತದೆ.

---